**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/69/ಇಎಸ್‌ಟಿ(7)2016 12465

**ನಿರ್ದೇಶಕರವರ ಕಛೇರಿ,**
**ತಾಂತ್ರಿಕ ಶಿಕ್ಷಣ ಇಲಾಖೆ,**
**ಬೆಂಗಳೂರು-560 001,**
**ದಿನಾಂಕ: 03/02/2017**

## ಜ್ಞಾಪನ

ವಿಷಯ: ದಿನಾಂಕ: 06-02-2017 ರಿಂದ ಪ್ರಾರಂಭವಾಗಲಿರುವ ವಿಧಾನಸಭೆ ಮತ್ತು ವಿಧಾನಪರಿಷತ್ತು ಅಧಿವೇಶನಗಳ ಬಗ್ಗೆ

-*-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಅಧಿಕಾರಿ/ಸಿಬ್ಬಂದಿಯವರಿಗೆ ದಿನಾಂಕ: 06-02-2017 ರಿಂದ ಪ್ರಾರಂಭವಾಗಲಿರುವ ವಿಧಾನಸಭೆ ಮತ್ತು ವಿಧಾನಪರಿಷತ್ತು ಅಧಿವೇಶನಗಳು ಮುಗಿಯುವವರೆಗೂ ಅವರ ಹೆಸರಿನ ಮುಂದೆ ನಮೂದಿಸಿರುವ ಕಾರ್ಯವನ್ನು ವಹಿಸಲಾಗಿದೆ.

| | | |
|---|---|---|
| ಅ | ಶ್ರೀ ಎ.ಎಂ. ಬೋಜೆದಾರ<br>ಜಂಟಿ ನಿರ್ದೇಶಕರು (ಯೋಜನೆ)<br>9480308089<br>ಶ್ರೀ ಜಿ. ಶ್ರೀಕಾಂತ್,<br>ಜಂಟಿ ನಿರ್ದೇಶಕರು (ತನಿಖೆ),<br>9448820473 | ವಿಧಾನಸಭೆ ಮತ್ತು ವಿಧಾನಪರಿಷತ್ ಕಾರ್ಯಕಲಾಪಗಳಿಗೆ ಮಾಹಿತಿ ಒದಗಿಸುವ ಹಾಗೂ ಪ್ರಶ್ನೆಗಳಿಗೆ ಉತ್ತರಗಳನ್ನು ಸಕಾಲದಲ್ಲಿ ಕಳುಹಿಸುವ ಹಾಗೂ ಕಾಲಕಾಲಕ್ಕೆ ನಿರ್ದೇಶಕರಿಗೆ ವರದಿ ನೀಡುವ ಸಂಪೂರ್ಣ ಉಸ್ತುವಾರಿ. |
| | ಶ್ರೀ ಶೇಖರ್<br>ಉಪನಿರ್ದೇಶಕರು (ಐಐಐಸಿ)(ಪ್ರಭಾರೆ)<br>9448738758<br>ಶ್ರೀ ಬಿ.ಜಯರಾಜ್<br>ಉಪ ನಿರ್ದೇಶಕರು (ಯೋಜನೆ) (ಪ್ರಭಾರೆ)<br>8156263027<br>ಶ್ರೀ ಸೆಲ್ವದಾರ್ .ಡಿ. ಗೋನ್ಸಾಲ್ವಿಸ್,<br>ಹಿರಿಯ ತಾಂತ್ರಿಕ ಸಹಾಯಕರು | ವಿಧಾನಸಭೆ ಮತ್ತು ವಿಧಾನಪರಿಷತ್ತುಗಳ ಅಧಿವೇಶನಕ್ಕೆ ಸಂಬಂಧಿಸಿದ ಈ ಇಲಾಖೆಯ ವ್ಯಾಪ್ತಿಗೆ ಬರುವಂತಹ ವಿಷಯಗಳನ್ನು ಸಂಗ್ರಹಿಸಿ ಬಂದ ಪ್ರಶ್ನೆಗಳಿಗೆ ಉತ್ತರಗಳನ್ನು ತುರ್ತಾಗಿ ಕಳುಹಿಸುವ ಸಲುವಾಗಿ ಸಂಯೋಜನಾಧಿಕಾರಿಗಳನ್ನಾಗಿ ನೇಮಿಸಿದೆ. |
| ಆ | ಶ್ರೀ ಮೊಹಮ್ಮದ್ ಅನ್ವರ್,<br>ವಿಷಯ ಪರಿವೀಕ್ಷಕರು,<br>9449025243<br><br>ಶ್ರೀಮತಿ ಮಂಜುಳ ಎಸ್.,<br>ಸಹಾಯಕ ನಿರ್ದೇಶಕರು<br>(ನಿಯೋಜನೆ ಮೇರೆಗೆ)<br>9445482859 | ವಿಧಾನಸಭೆಯ ಅಧಿವೇಶನಗಳು ನಡೆಯುವಾಗ ಕಛೇರಿಯಲ್ಲಿ ಹಾಜರಿದ್ದು ತಾಂತ್ರಿಕ ಮತ್ತು ಗಣಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬಂದಾಗ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿಯವರು ಮತ್ತು ಅವರ ಸಿಬ್ಬಂದಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸುವುದು ಮತ್ತು ತತ್ಸಂಬಧದ ನಡವಳಿಗಳನ್ನು ನಿರ್ದೇಶಕರ ಗಮನಕ್ಕೆ ತರುವುದು. ಅಲ್ಲದೆ ಪ್ರತಿನಿತ್ಯ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಉಪಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ತಾಂತ್ರಿಕ ಮತ್ತು ಗಣಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಧಾನಮಂಡಲದ ಪ್ರಶ್ನೆಗಳು ಮತ್ತು ತತ್ಸಂಬಂಧದ ಇತರೆ ವಿಷಯಗಳನ್ನು ಅರಿತುಕೊಂಡು ಜರೂರಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮ ಕುರಿತು ನಿರ್ದೇಶಕರಿಗೆ ಮತ್ತು ಸಹ ನಿರ್ದೇಶಕರು (ಆಡಳಿತ) ಇವರಿಗೆ ವರದಿ ನೀಡುವುದು. |

......2

| | | |
|---|---|---|
| ಇ | ಶ್ರೀ ಶ್ರೀನಿವಾಸ್.ವಿ<br>ಅಭಿವೃದ್ಧಿ ಅಧಿಕಾರಿ,<br>9845525210<br><br>ಶ್ರೀ ಹೆಚ್. ಟಿ.ಪ್ರಕಾಶ್<br>ತಾಂತ್ರಿಕ ಸಹಾಯಕರು<br>9900128504 | ವಿಧಾನಪರಿಷತ್ತಿನಲ್ಲಿ ಅಧಿವೇಶನಗಳು ನಡೆಯುವಾಗ ಕಛೇರಿಯಲ್ಲಿ ಹಾಜರಿದ್ದು ತಾಂತ್ರಿಕ ಮತ್ತು ಗಣಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬಂದಾಗ ಶಿಕ್ಷಣ ಸಚಿವಾಲಯದ ಕಾರ್ಯದರ್ಶಿಯವರು ಮತ್ತು ಅವರ ಸಿಬ್ಬಂದಿಗೆ ಬೇಕಾಗಿರುವ ಮಾಹಿತಿಯನ್ನು ಒದಗಿಸುವುದು ಮತ್ತು ತತ್ಸಂಬಂಧದ ನಡವಳಿಗಳನ್ನು ನಿರ್ದೇಶಕರ ಗಮನಕ್ಕೆ ತರುವುದು. ಅಲ್ಲದೆ ಪ್ರತಿನಿತ್ಯ ಸರ್ಕಾರದ ಉಪಕಾರ್ಯದರ್ಶಿಗಳು ಮತ್ತು ಅಧೀನ ಕಾರ್ಯದರ್ಶಿಗಳನ್ನು ಸಂಪರ್ಕಿಸಿ ತಾಂತ್ರಿಕ ಮತ್ತು ಗಣಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಧಾನಮಂಡಲದ ಪ್ರಶ್ನೆಗಳು ಮತ್ತು ತತ್ಸಂಬಂಧದ ಇತರೆ ವಿಷಯಗಳನ್ನು ಅರಿತುಕೊಂಡು ಜರೂರಾಗಿ ತೆಗೆದುಕೊಳ್ಳಬೇಕಾಗಿರುವ ಕ್ರಮ ಕುರಿತು ನಿರ್ದೇಶಕರಿಗೆ ಮತ್ತು ಸಹ ನಿರ್ದೇಶಕರು (ಆಡಳಿತ) ಇವರಿಗೆ ವರದಿ ನೀಡುವುದು. |
| ಈ | ಶ್ರೀ ಬಿ.ಎಲ್.ಬಸವರಾಜು<br>ಪ್ರ.ದ.ಸ<br>7760501544<br>ಶ್ರೀ ಸಿದ್ದಗಂಗಪ್ಪ<br>ದ್ವಿ.ದ.ಸ<br>9743674376 | ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ವಿಧಾನಮಂಡಲದ ಸಚಿವಾಲಯದ ಮತ್ತು ಶಿಕ್ಷಣ ಸಚಿವಾಲಯದಿಂದ ಪ್ರತಿದಿನ ಮತ್ತು ಮರುದಿನ ವಿಧಾನಸಭೆ ಮತ್ತು ವಿಧಾನಪರಿಷತ್ತುಗಳ ಅಧಿವೇಶನಗಳಿಗೆ ನಿಗದಿಪಡಿಸಿರುವ ವ್ಯವಹಾರಗಳ ಮತ್ತು ಇತರ ವಿಷಯಗಳ ಪಟ್ಟಿಯನ್ನು ಪಡೆದು ನಿರ್ದೇಶಕರು ಮತ್ತು ಮೇಲ್ಕಂಡ ಅಧಿಕಾರಿ ವರ್ಗದವರ ಗಮನಕ್ಕೆ ತರುವುದು. |

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ವಿಭಾಗಗಳ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರು (ಗ್ರೂಪ್-ಡಿ ನೌಕರರು ಸೇರಿದಂತೆ) ಅಧಿವೇಶನ ನಡೆಯುವಷ್ಟು ಕಾಲ ಯಾವುದೇ ರೀತಿಯ ರಜೆ ಹಾಕಬಾರದು ಹಾಗೂ ಕಛೇರಿ ವೇಳೆಯ ನಂತರವೂ ಸಂಬಂಧಪಟ್ಟ ವಿಭಾಗಗಳಲ್ಲಿ ಹಾಜರಿದ್ದು ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಪ್ರಶ್ನೆಗಳಿಗೆ/ಗಮನ ಸೆಳೆಯುವ ಸೂಚನೆಗಳಿಗೆ ಉತ್ತರಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಪೂರಕ ಟಿಪ್ಪಣಿಯೊಂದಿಗೆ ತಯಾರಿಸಿ ಕೊಡತಕ್ಕದ್ದು ಹಾಗೂ ಸರ್ಕಾರಕ್ಕೆ ತಲುಪಿಸತಕ್ಕದ್ದು. ಇಲ್ಲವಾದಲ್ಲಿ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

ನಿರ್ದೇಶಕರು

ಇವರಿಗೆ,

ಮೇಲ್ಕಂಡ ಅಧಿಕಾರಿಗಳು/ಸಿಬ್ಬಂದಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-1
2. ಸರ್ಕಾರದ ಕಾರ್ಯದರ್ಶಿ, ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
3. ಸರ್ಕಾರದ ಕಾರ್ಯದರ್ಶಿ, ವಿಧಾನ ಪರಿಷತ್ ಸಚಿವಾಲಯ, ವಿಧಾನಸೌಧ, ಬೆಂಗಳೂರು-1
4. ಶ್ರೀ ಮಂಜುನಾಥ ಪಾಟೀಲ್, ಸರ್ಕಾರದ ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1
5. ಶ್ರೀ ಎಸ್. ವೆಂಕಟೇಶ್, ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು-1
6. ನಿರ್ದೇಶಕರ ಆಪ್ತಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
7. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಯವರು ಹಾಗೂ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್‌ಗಳು/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ/ಚಿತ್ರಕಲಾ ಮಹಾವಿದ್ಯಾಲಯ/ಶಾಲೆಗಳ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಯವರು ಕಛೇರಿಯ ವೇಳೆಯ ನಂತರವೂ ಕಛೇರಿಯಲ್ಲಿ ಹಾಜರಿದ್ದು ವಿಧಾನಸಭೆ/ವಿಧಾನಪರಿಷತ್ತಿನ ಪ್ರಶ್ನೆಗಳು/ಗಮನ ಸೆಳೆವ ಸೂಚನೆಗಳಿಗೆ ಪೂರಕ ಮಾಹಿತಿಯನ್ನು ತ್ವರಿತವಾಗಿ ಒದಗಿಸತಕ್ಕದ್ದು.
8. ನಿರ್ದೇಶನಾಲಯದ ಎಲ್ಲಾ ವಾಹನ ಚಾಲಕರು ವಿಧಾನಮಂಡಲದ ಕಲಾಪಗಳು ಮುಗಿಯುವವರೆಗೆ ಅಧಿವೇಶನ ಕೆಲಸಕ್ಕೆ ಹಾಜರಾಗುವ ಹಿರಿಯ ಅಧಿಕಾರಿಗಳಿಗಾಗಿ ವಾಹನ ಉಪಯೋಗಿಸುವಂತೆ ಸೂಚಿಸಲಾಗಿದೆ.
9. ಲೆಕ್ಕಾಧಿಕಾರಿಗಳ ಗಮನಕ್ಕೆ – ಪರಿವೀಕ್ಷಣೆಗೆ ಹೋಗುವ ಸಿಬ್ಬಂದಿಗಳು ಅಧಿವೇಶನ ಮುಗಿಯುವರೆಗೆ ಹೋಗತಕ್ಕದ್ದಲ್ಲ ಎಂದು ಕಟ್ಟುನಿಟ್ಟಾಗಿ ತಿಳಿಸಲಾಗಿದೆ.
10. ಇ-ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ

Sh E-7 Lc quen